ಮೂಲ ದಾವಾ ನಂಃ 92/2014

ಡಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **20-02-2024** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಂ.ಎಸ್.ಬಿ ವಕೀಲರಿಂದಃ**

ನನ್ನ ತಂದೆಯ ಹೆಸರು ಸುಬ್ರಾಯ , ಅವರು ಮೂಲತಃ ಮೂರುರು ಗ್ರಾಮದವರು. ನಾವು ಹೊನ್ನಾವರಕ್ಕೆ ಬಂದು ಅಂದಾಜು 53 ವರ್ಷ ಆಯಿತು. ನಾವು ಹೊನ್ನಾವರದ ನಡುಚಿಟ್ಟೆಯಲ್ಲಿ ವಾಸ್ತವ್ಯ ಮಾಡಿ ಬಂದಿರುತ್ತೇವೆ. ನಡುಚಿಟ್ಟೆಯಲ್ಲಿ ನಮ್ಮ ಸ್ವಂತ ಮನೆ ಇದೆ. ನಮ್ಮ ಮನೆಯಿಂದ ದಾವಾ ಸ್ಥಳವು ಅಂದಾಜು 1 1/2 ಕಿ.ಮಿ ದೂರದಲ್ಲಿದೆ. ದಾವಾ ಸ್ಥಳವು ಮೊದಲು ಖಾಲಿ ಇದ್ದು , ಆ ನಂತರ ನಾವೇ ಮೊದಗಲಿಗರಾಗಿ ಅಲ್ಲಿ ಮನೆಯನ್ನು ನಿರ್ಮಿಸಿದ್ದೇವೆ . ನಾನು ಅತಿಥಿ ಶಿಕ್ಷಕನಾಗಿ ಹೊನ್ನಾವರದ ಎಸ್.ಡಿ.ಎಂ ಕಾಲೇಜನಲ್ಲಿ ಕಾರ್ಯನಿರ್ವಹಿಸಿದ್ದೇನೆ. ಈಗ ಸರ್ಕಾರಿ ಡಿಗ್ರಿ ಕಾಲೇಜ್ ಬಾಡದಲ್ಲಿ ಅತಿಥಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ. ವಾದಿಯು ಸಹ ಎಸ್.ಡಿ.ಎಂ ಕಾಲೇಜನಲ್ಲಿ ಖಾಯಂ ಹಿಂದಿ ಪ್ರಾಧ್ಯಾಪಕರಾಗಿದ್ದಾರೆ. ನನಗೆ ಅಂದಾಜು 25 ವರ್ಷಗಳಿಂದ ವಾದಿಯ ಪರಿಚಯ ಇದೆ. ವಾದಿಯು ಹೊನ್ನಾವರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾರೆ. ವಾದಿಯು ಹೊನ್ನಾವರದಲ್ಲಿ ತಮ್ಮದೇ ಆದ ಸ್ವಂತ ಮನೆಯನ್ನು ಇಲ್ಲಿಯವರೆಗೂ ಹೊಂದಿದ್ದು ಇರುವುದಿಲ್ಲ.

ದಾವಾ ಸ್ಥಳವು ಒಟ್ಟು 30 ಗುಂಟೆ ಕ್ಷೇತ್ರವಾಗಿದೆ ಎಂದರೆ ಸರಿ. ಸದರಿ ಒಟ್ಟು ದಾವಾ ಸ್ಥಳವು ಬಾಲಚಂದ್ರ ಮಾದೇವ ನಾಯ್ಕ ರವರಿಗೆ ಸೇರಿತ್ತು ಎಂದರೆ ಸರಿ. ವಾದಿಯು ದಿನಾಂಕಃ 05.09.2011 ರಂದು ದಾವಾ ಸ್ಥಳದಲ್ಲಿನ ಒಟ್ಟು 30 ಗುಂಟೆ ಕ್ಷೇತ್ರದಲ್ಲಿ 7 ಗುಂಟೆ ಕ್ಷೇತ್ರವನ್ನು ಬಾಲಚಂದ್ರ ಮಾದೇವ ನಾಯ್ಕ ರವರಿಂದ ಖರೀದಿಸಿದ್ದಾರೆ ಎಂದರೆ ಸರಿ. ವಾದಿಯು ಖರೀದಿ ಮಾಡುವಾಗ ಆ 7 ಗುಂಟೆ ಕ್ಷೇತ್ರವು ಖಾಲಿ ಇದ್ದು , ಸ್ವಲ್ಪ ಗುಡ್ಡ ಇತ್ತು ಎಂದರೆ ಸರಿ. ಸದರಿ ದಾವಾ ಸ್ಥಳದಲ್ಲಿ ನನ್ನ ತಂದೆಯು 3 ಗುಂಟೆ ಕ್ಷೇತ್ರವನ್ನು ಬಾಲಚಂದ್ರ ಮಾದೇವ ನಾಯ್ಕ ರವರಿಂದ ಖರೀದಿಸಿದ್ದಾರೆ , ಆದರೆ ಅದು ಯಾವ ಸಾಲಿನಲ್ಲಿ ಎಂಬುದು ನನಗೆ ನೆನಪಿಲ್ಲ. ವಾದಿಯು ಖರೀದಿ ಮಾಡಿದ 3 ತಿಂಗಳ ನಂತರದಲ್ಲಿ ನನ್ನ ತಂದೆಯು ಆ 3 ಗುಂಟೆ ಕ್ಷೇತ್ರವನ್ನು ಖರೀದಿಸಿದ್ದಾರೆ. ವಾದಿಯು 7 ಗುಂಟೆ ಜಮೀನನ್ನು ಖರೀದಿ ಮಾಡುವಾಗ ನಾನು ಅವರಿಗೆ ಸಹಾಯ ಮಾಡಿರುತ್ತೇನೆ.

ವಾದಿ ಮತ್ತು ನನ್ನ ತಂದೆಯು ಸದರಿ ಸ್ಥಳಗಳನ್ನು ಖರೀದಿ ಮಾಡುವ ಕಾಲಕ್ಕೆ ಆ ಸ್ಥಳವು ಬಿನಶೇತ್ಕಿ ಆಗಿತ್ತು. ಬಾಲಚಂದ್ರ ಮಾದೇವ ನಾಯ್ಕ ರವರೇ ಬಿನಶೇತ್ಕಿ ಮಾಡಿದ್ದಾರೆ. ನನ್ನ ತಂದೆಯು ಖರೀದಿ ಮಾಡುವಾಗ ಬಾಲಚಂದ್ರ ಮಾದೇವ ನಾಯ್ಕ ರವರು ನಕಾಶೆಯನ್ನು ತಯಾರಿಸಿ , ಬೌಂಡರಿಗಳನ್ನು ಗುರುತಿಸಿ ನೀಡಿದ್ದು ಇರುವುದಿಲ್ಲ. ಬಾಲಚಂದ್ರ ಮಾದೇವ ನಾಯ್ಕ ರವರು ನಾವು ಖರೀದಿ ಮಾಡುವಾಗ ನಿಖರವಾಗಿ ಗಡಿ ಗುರುತುಗಳನ್ನು ಗುರುತಿಸಿ ಕೊಟ್ಟಿದ್ದು ಇರುವುದಿಲ್ಲ , ಆದರೆ ಜಾಗವನ್ನು ತೋರಿಸಿ ಕೊಟ್ಟಿರುತ್ತಾರೆ.

ನಾನು ಕ್ರಯದಸ್ತಾವೇಜವನ್ನು ಓದಿ ನೋಡಿದ್ದೇನೆ. ಸದರಿ ಕ್ರಯದಸ್ತಾವೇಜನಲ್ಲಿ ನಾವು ಖರೀದಿ ಮಾಡಿದ 3 ಗುಂಟೆ ಸ್ಥಳದ ಗಡಿ ಗುರುತುಗಳನ್ನು ಸ್ಪಷ್ಟವಾಗಿ ನಮೂದಿಸಿದ್ದಾರೆ. ನಮ್ಮ 3 ಗುಂಟೆ ಜಾಗದ ಪೂರ್ವಕ್ಕೆ ಗುಡ್ಡ , ಪಶ್ಚಿಮಕ್ಕೆ ಒಬ್ಬ ಕ್ರಿಶ್ಚಿಯನ್ ರವರ ಮನೆ ಇದೆ, ಉತ್ತರಕ್ಕೆ ಗುಡ್ಡ ಹಾಗೂ , ದಕ್ಷೀಣಕ್ಕೆ ವಾದಿಯವರ ಸ್ಥಳ ಇದೆ. ಸದರಿ ಈಗ ನಾನು ಹೇಳಿದ ಗಡಿ ಗುರುತುಗಳೇ ಕ್ರಯ ದಸ್ತಾವೇಜನಲ್ಲಿ ನಮೂದಿಸಿದ್ದಾರೆ. ಕ್ರಯ ದಸ್ತಾವೇಜಿನ ಜೊತೆಗೆ ಒಂದು ನಕಾಶೆಯನ್ನು

ಇಟ್ಟಿದ್ದಾರೆ. ಸದರಿ ನಕಾಶೆಯಲ್ಲಿ ನಮ್ಮ 3 ಗುಂಟೆ ಸ್ಥಳವನ್ನು ಗುರುತಿಸಿದ್ದಾರೆ. ಸದರಿ ನಕಾಶೆಯಲ್ಲಿ ಆ 3 ಗುಂಟೆ ಸ್ಥಳವನ್ನು ಅಂದಾಜಿನಲ್ಲಿ ಗುರುತಿಸಿದ್ದಾರೆ.

ವಾದಿಯು ಖರೀದಿ ಮಾಡಿದ ಜಾಗವನ್ನು ಸರ್ವೇ ಮಾಡಿಯೇ ಗುರುತಿಸಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಸರ್ವೇ ನ್ನು ರಸ್ತೆಯಿಂದ ಮಾಡಿರುವುದಿಲ್ಲ ಎಂಬುದಾಗಿ ನುಡಿದಿದ್ದಾರೆ. ವಾದಿಯು ಸ್ಥಳವನ್ನು ಖರೀದಿ ಮಾಡುವಾಗ ಹಣಕಾಸಿನ ವಿಷಯದಲ್ಲಿ ನಾನು ಮಧ್ಯಸ್ಥಗಾರನಾಗಿ ಭಾಗವಹಿಸಿದ್ದೇನೆ ಹೊರತು ಸರ್ವೇ ಮಾಡುವಾಗ ನಾನು ಹಾಜರು ಇರಲಿಲ್ಲ. ವಾದಿಯು ಖರೀದಿ ಮಾಡಿದ ಸ್ಥಳದ ಕ್ರಯ ದಸ್ತಾವೇಜಿನಲ್ಲಿ ಸಾಕ್ಷಿಯಾಗಿ ನಾನೇ ಇರುತ್ತೇನೆ. ವಾದಿಯು ಖರೀದಿ ಮಾಡಿದ ಸ್ಥಳದ ಕ್ರಯ ಪತ್ರದ ಜೊತೆಗೆ ನಕಾಶೆ ಇದೆ ಎಂದರೆ ಸರಿ. ಸದರಿ ನಕಾಶೆಯಲ್ಲಿಯು ಸಹ ವಾದಿಯ ಸ್ಥಳವನ್ನು ಗುರುತು ಮಾಡಿದ್ದಾರೆ ಎಂದರೆ ಸರಿ.

ವಾದಿಯ 7 ಗುಂಟೆ ಸ್ಥಳದ ಉತ್ತರ ದಿಕ್ಕಿಗೆ ನಾವು ಕಟ್ಟಿರುವ ಕಟ್ಟಡ ಇದ್ದು , ಪೂರ್ವಕ್ಕೆ ಗುಡ್ಡ ಇದ್ದು , ಪಶ್ಚಿಮಕ್ಕೆ ಕ್ರಿಶ್ಚಿಯನ ರವರ ಮನೆ , ಹಾಗೂ ದಕ್ಷೀಣ ದಿಕ್ಕಿಗೆ ನಾಗರಾಜ ನಾಯ್ಕ ರವರ ಜಮೀನು ಇದೆ. ವಾದಿಯ ಕ್ರಯ ದಸ್ತಾವೇಜನಲ್ಲಿ ಸದರಿ ಗಡಿ ಗುರುತುಗಳನ್ನೇ ನಮೂದಿಸಲಾಗಿದೆ. ನಾವು ಖರೀದಿ ಮಾಡಿದ 3 ಗುಂಟೆ ಸ್ಥಳದಲ್ಲಿ ವಾದಿಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿ. ಅದರಂತೆ ವಾದಿಯು ಖರೀದಿ ಮಾಡಿರುವ 7 ಗುಂಟೆ ಜಾಗದಲ್ಲಿ ನಮಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿ.

ಸದರಿ ದಾವೆಗೆ ಉದಾಹರಣೆಯನ್ನು ಸಲ್ಲಿಸುವಾಗ ನಮ್ಮ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿದ್ದೇನೆ. ನಾನು ಉದಾಹರಣೆಯನ್ನು ಸಲ್ಲಿಸುವಾಗ ವಾದಿಯು ಹಣವನ್ನು ನೀಡದೇ ಇರುವುದರಿಂದ ನನಗೆ ತೊಂದರೆ ಉಂಟಾದ ಬಗ್ಗೆ ಉದಾಹರಣೆಯಲ್ಲಿ ಹೇಳಿ ಬರೆಸಿದ್ದು ಇರುವುದಿಲ್ಲ. ಕ್ರಯ ದಸ್ತಾವೇಜನಲ್ಲಿ ವಾದಿಯು ಎಷ್ಟು ಹಣವನ್ನು ಕೊಡುವುದು ಬಾಕಿ ಇತ್ತು ಎಂಬುದರ ಬಗ್ಗೆ ನಮೂದು ಮಾಡಿದ್ದು ಇರುವುದಿಲ್ಲ. ಸದರಿ ಕ್ರಯ ದಸ್ತಾವೇಜಿನಲ್ಲಿ ಪೂರ್ತಿ ಹಣವು ಕೊಟ್ಟಿದ್ದಾರೆ ಎಂಬುದಾಗಿ ನಮೂದಿಸಿ , ದಸ್ತಾವೇಜನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮಾರಾಟದ ಪ್ರತಿಫಲ ಚುಕ್ತಾ ಆಗಿದಿದ್ದರೇ , ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನಮೂದಾಗುವುದಿಲ್ಲ ಎಂಬುದಾಗಿ ನುಡಿದಿದ್ದಾರೆ. ಸಾಮಾನ್ಯವಾಗಿ ಕ್ರಯ ದಸ್ತಾವೇಜಿನಲ್ಲಿ ಹಣ ಚುಕ್ತಾ ಆದಾಗ ಮಾತ್ರ ಸದರಿ ವಿಷಯವನ್ನು ದಸ್ತಾವೇಜಿನಲ್ಲಿ ಬರೆಸಿ , ಸಹಿ ಹಾಕುತ್ತಾರೆ ಎಂದರೆ ಸರಿ.

ವಾದಿಯು ಖರೀದಿ ಮಾಡಿದ 7 ಗುಂಟೆ ಕ್ಷೇತ್ರಕ್ಕೆ 1 ಗುಂಟೆಗೆ 1,00,000/- ಎಂಬುದಾಗಿ ಮಾತುಕತೆ ಆಗಿದ್ದು , ಅದರಲ್ಲಿ ವಾದಿಯು ಕೇವಲ 5,00,000/- ಲಕ್ಷ ಹಣವನ್ನು ಮಾತ್ರ ಕೊಟ್ಟಿರುತ್ತಾರೆ. ಆದರೆ ಕ್ರಯ ದಸ್ತಾವೇಜಿನಲ್ಲಿ ಎಷ್ಟು ಮೊತ್ತವನ್ನು ನಮೂದಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿಯು ಖರೀದಿಸಿದ ಸ್ಥಳದಲ್ಲಿ ಸ್ವಲ್ಪ ಗುಡ್ಡ ಇದ್ದು , ಅದನ್ನು ತೆಗೆದುಕೊಟ್ಟಾಗ 2,00,000/- ಲಕ್ಷ ಹಣವನ್ನು ಕೊಡುತ್ತೇನೆ ಎಂಬುದಾಗಿ ವಾದಿಯು ಹೇಳಿದ್ದರು ಎಂದು ನುಡಿದಿದ್ದಾರೆ. ಸದರಿ ಬಾಕಿ ಇರುವ 2 ಲಕ್ಷ ಹಣವು ಸಹ ಕ್ರಯಕ್ಕೆ ಸಂಬಂಧಪಟ್ಟದ್ದಾಗಿದೆ. ಬಾಲಚಂದ್ರ ಮಾದೇವ ನಾಯ್ಕ ರವರು 2 ಲಕ್ಷ ಹಣವನ್ನು ವಸೂಲಿ ಮಾಡಿಕೊಳ್ಳುವ ಸಲುವಾಗಿ ವಾದಿಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿದ್ದು ಇರುವುದಿಲ್ಲ. ನಾನು ವಾದಿಯ ವ್ಯವಹಾರದಲ್ಲಿ ಮಧ್ಯಸ್ಥಗಾರನಾಗಿದ್ದರಿಂದ , ವಾದಿಯು ಹಣವನ್ನು ಪಾವತಿಸಿದೇ ಇದ್ದದ್ದರಿಂದ ನಾನು ವಕೀಲರ ಮೂಲಕ ಅವರಿಗೆ ನೋಟಿಸ್ಸನ್ನು ನೀಡಿದ್ದು ಇರುವುದಿಲ್ಲ, ಹಾಗೂ ಯಾವುದೇ ಕ್ರಮವನ್ನು ಕೈಗೊಂಡಿದ್ದು ಇರುವುದಿಲ್ಲ. ಆದರೆ ನಾನು ಮೌಖಿಕವಾಗಿ ವಾದಿಯ ಜೊತೆ ಮಾತನಾಡಿದ್ದೇನೆ. ವಾದಿಯು ಬಾಲಚಂದ್ರ ಮಾದೇವ ನಾಯ್ಕ ರವರಿಗೆ ಯಾವುದೇ ಹಣವನ್ನು ಕೊಡುವುದು ಬಾಕಿ ಇಲ್ಲ ಎಂದರೆ ಸರಿಯಲ್ಲ. ನಾವು ಮತ್ತು ವಾದಿಯು ಖರೀದಿ ಮಾಡುವ ಕಾಲಕ್ಕೆ ಸದರಿ ಸ್ಥಳದ ನಕಾಶೆಯನ್ನು ತಯಾರಿಸಿ , ಸ್ಪಷ್ಟವಾದ ಗಡಿ ಗುರುತುಗಳನ್ನು

ಹಾಕಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ವಾದಿ ಖರೀದಿ ಮಾಡಿರುವ ಜಾಗ ಹಾಗೂ ನಮ್ಮ ತಂದೆ ಖರೀದಿ ಮಾಡಿರುವ ಜಾಗದ ಮಧ್ಯದಲ್ಲಿ ಶಿಲೆ ಕಂಬ ಹಾಗೂ ತಂತಿ ಬೇಲಿಯನ್ನು ಹಾಕಿದ್ದಾರೆ ಎಂದರೆ ಸರಿ. ಸದರಿ ಶಿಲೆ ಕಂಬ ಹಾಗೂ ತಂತಿ ಬೇಲಿಯನ್ನು ವಾದಿಯೇ ಹಾಕಿಸಿದ್ದಾರೆ ಎಂದರೆ ಸರಿ. ವಾದಿಯು ಇನ್ನುಳಿದ 3 ದಿಕ್ಕುಗಳಿಗೆ ಯಾವುದೇ ಪಾಗಾರ ಇದಿದ್ದು ಇರುವುದಿಲ್ಲ. ನಾವು ಖರೀದಿ ಮಾಡಿದ ಜಾಗದ ಇನ್ನುಳಿದ 3 ದಿಕ್ಕುಗಳಲ್ಲಿಯು ಸಹ ಯಾವುದೇ ಪಾಗಾರ ಇದಿದ್ದು ಇರುವುದಿಲ್ಲ. 2012 ನೇ ಸಾಲಿನಲ್ಲಿ ನಾವು ಖರೀದಿಸಿದ ಜಾಗದಲ್ಲಿ ಮನೆಯನ್ನು ಕಟ್ಟಲು ಪ್ರಾರಂಭಿಸಿದೇವು. ನಾವು ಮನೆಯನ್ನು ಕಟ್ಟುವ ಪೂರ್ವದಲ್ಲಿ ಸದರಿ ಸ್ಥಳವನ್ನು ಸರ್ವೇ ಮಾಡಿಸಿದ್ದೇವೆ. ಆ ಸಮಯದಲ್ಲಿ ನಕಾಶೆಯನ್ನು ತಯಾರಿಸಿ , ಗಡಿ ಗುರುತುಗಳನ್ನು ಹಾಕಿಕೊಟ್ಟಿದ್ದಾರೆ. ಸದರಿ ನಕಾಶೆ ನನ್ನ ಹತ್ತಿರ ಇದ್ದು , ಅದನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

ನಾವು ಮನೆಯನ್ನು 25*53 ಜಾಗದ ಅಳತೆಯಲ್ಲಿ ಕಟ್ಟಲು ಪಂಚಾಯತದಿಂದ ಪರವಾನಿಗೆಯನ್ನು ಪಡೆದಿದ್ದೇವೆ. ನಾವು ನಮ್ಮ ಜಾಗದ ಪಶ್ಚಿಮ ದಿಕ್ಕಿನಡೆಗೆ ರಸ್ತೆಗೆ ತಾಗಿಕೊಂಡು ಮನೆಯನ್ನು ಕಟ್ಟಿದ್ದೇವೆ. ನಾವು ವಾದಿ ಮತ್ತು ನಮ್ಮ ಸ್ಥಳದ ಮಧ್ಯದಲ್ಲಿರುವ ತಂತಿ ಬೇಲಿಯಿಂದ 4 1/2 ಫೂಟ್ ಜಾಗವನ್ನು ಬಿಟ್ಟು ಮನೆಯನ್ನು ಕಟ್ಟಿದ್ದೇವೆ. ನಾವು ಪಂಚಾಯತನಿಂದ ಪಡೆದ ಪರವಾನಿಗೆಯಲ್ಲಿ 3-4 ಅಡಿಯಷ್ಟು ಸೆಟ್ ಬ್ಯಾಕ್ ನ್ನು ಬಿಡಬೇಕು ಎಂಬುದಾಗಿ ನಮೂದಿಸಿದ್ದಾರೆ. ನಾವು ಪಂಚಾಯತ್ ನವರು ನೀಡಿದ ಪರವಾನಿಗೆಯಂತೆಯೇ ಮನೆಯನ್ನು ಕಟ್ಟಿದ್ದು ಅದನ್ನು ಉಲಂಘನೆ ಮಾಡಿದ್ದು ಇರುವುದಿಲ್ಲ. ನಮ್ಮ ಮನೆಯು ಎರಡು ಮಹಡಿಯದ್ದಾಗಿದೆ.

ನಮ್ಮ ಮನೆಯ ಮೊದಲ ಮಹಡಿಯ ಸಂಡಾಸ್ ಇಮಾರತು ದಕ್ಷಿಣ ದಿಕ್ಕಿಗೆ ಇದೆ ಎಂದರೆ ಸರಿ. ನಾವು ಸದರಿ ಸಂಡಾಸ್ ಇಮಾರತಗೆ ಮನೆಯ ಹೊರಗಿನಿಂದ ಕಂಬವನ್ನು ನಿಲ್ಲಿಸಿ ಕಟ್ಟಿದ್ದೇವೆ ಎಂದರೆ ಸರಿಯಲ್ಲ. ನಾವು ಸದರಿ ಸಂಡಾಸ್ ಇಮಾರತ ನ್ನು ಕಟ್ಟುವಾಗ ನಮ್ಮ ಮತ್ತು ವಾದಿಯ ಜಾಗದ ಮಧ್ಯ ಇರುವ ತಂತಿ ಬೇಲಿಯನ್ನು ನಾಶಪಡಿಸಿ ಕಟ್ಟಿದ್ದೇವೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

ಹೆಚ್ಚುವರಿ ಪ್ರ ದ ನ್ಯಾದಂ ಹೊನ್ನಾವರ.